ದಿನಾಂಕ 17-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು: ವಾದಿಯ ಪರ ಶ್ರೀ ಜಿ.ಎಸ್.ಕೆ ವಕೀಲರಿಂದ:</u>**

4. ವಾದಿಯ ಮನೆಯ ಸಂ: 199 ಎಂದರೆ ಗೊತ್ತಿಲ್ಲ. ಅಕ್ಕಿಆಲೂರು- ಕಲ್ಲಾಪುರ ಗ್ರಾಮದ ಮುಖ್ಯ ರಸ್ತೆಯ ಪಶ್ಚಿಮ ದಿಕ್ಕಿಗೆ ವಾದಿಯ ಮನೆಯು ಮುಖ ಮಾಡಿ ಇರುತ್ತದೆ ಎಂದರೆ ಸರಿ. ವಾದಿಯ ಮನೆಯ ಹಿತ್ತಲಿನ ಪೂರ್ವಕ್ಕೆ ಕಾಲುವೆ ಇದ್ದೆ ಎಂದರೆ ಸರಿ. ಸದರಿ ಕಾಲುವೆಗೆ ಉತ್ತರ - ದಕ್ಷಿಣವಾಗಿ 8 ರಿಂದ 10 ಅಡಿ ಅಗಲದ ಸಿ.ಡಿ ಇದೆ ಎಂದರೆ ಸಾಕ್ಷಿಯು 3 ಅಡಿ ಸಿ.ಡಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಿ.ಡಿ 8 ರಿಂದ 10 ಅಡಿಗಳ ಅಗಲ ಇದ್ದರೂ ಸಹ 3 ಅಡಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸದರಿ ಸಿ.ಡಿ ಮೂಲಕವೇ ವಾದಿಯು ಹೋಗಿ ಬಂದು ಮಾಡುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬೇರೆ ಕಾಲುದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಿ.ಡಿಯನ್ನು ಹೊರತುಪಡಿಸಿ ಬೇರೊಂದು ಕಾಲುದಾರಿ ಇರುವುದಿಲ್ಲ.

5. ವಾದಿಯು ದಾವಾ ಆಸ್ತಿಯಲ್ಲಿ 1972 ರಿಂದಲೂ ದೀರ್ಘಾವಧಿಯಲ್ಲಿ ಮತ್ತು ಸ್ಥಾಪಿತ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯಲ್ಲಿ ವ್ಯವಸಾಯದ ಸಲುವಾಗಿ ಟ್ರಾಕ್ಟರ್, ಎತ್ತುಗಳು ಮತ್ತು ಇತರ ವ್ಯವಸಾಯದ ಸಲಕರಣೆಗಳನ್ನು ಇಟ್ಟುಕೊಂಡು ಹಾಗೂ ಹುಲ್ಲಿನ ಬಣವೆಗಳನ್ನು ಹಾಕಿಕೊಂಡು ವಹಿವಾಟು ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಹಲವಾರು ವರ್ಷಗಳಿಂದ ದಾವಾ ಆಸ್ತಿಯ ಸುತ್ತಲೂ ವಾದಿಯು ನೀಲಗಿರಿ ಮರಗಳನ್ನು ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-3 ರ ಛಾಯಾ ಚಿತ್ರದಲ್ಲಿ ಕಾಣುವ ಆಸ್ತಿಯು ದಾವಾ ಆಸ್ತಿ ಎಂದರೆ ಸರಿಯಲ್ಲ.

-10-

6. ವಾದಿಯು ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ಅನುಯಾಯಿ ಎಂದರೆ ಸರಿಯಲ್ಲ. ನಾನು ಭಾರತೀಯ ಜನತಾ ಪಕ್ಷದ ಹಾನಗಲ್ಲ ತಾಲೂಕಿನ ಮಟ್ಟದಲ್ಲಿ ಮುಖಂಡ ಎಂದರೆ ಸರಿ. ಗಂಗಾಮತದ ಜನರು ಕಲ್ಲಾಪುರ ಗ್ರಾಮದಲ್ಲಿ ಬಹುಸಂಖ್ಯಾತರು ಎಂದರೆ ಸರಿ. ಗಂಗಾಮತದ

ಪಂಗಡದ ಜನರು 2018 ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಸೂಚಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಕಲ್ಲಾಪುರ ಗ್ರಾಮ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಬಿ.ಜೆ.ಪಿ ಪಕ್ಷದ ಮುಂಚೂಣಿ ನಾಯಕ ಎಂದರೆ ಸರಿ. ಮತದಾನ ಮತ್ತು ಚುನಾವಣೆಯ ಸಂದರ್ಭಗಳಲ್ಲಿ ಮೇಲ್ವಿಚಾರಣೆಯನ್ನು ಬಿ.ಜೆ.ಪಿ ಪಕ್ಷದವರು ನನ್ನ ಗ್ರಾಮ ಮತ್ತು ಸುತ್ತಮುತ್ತಲೂ ನನಗೆ ವಹಿಸುತ್ತಾರೆ ಎಂದರೆ ಸರಿ. ಗಂಗಾಮತ ಸಮಾಜಕ್ಕೆ ಆಸ್ತಿಯನ್ನು ಭಕ್ಷೀಸು ಮಾಡುವಂತೆ 1 ನೇ ಪ್ರತಿವಾದಿಗೆ ಆಮೀಷ ಒಡ್ಡಿದ್ದೆವು ಎಂದರೆ ಸರಿಯಲ್ಲ.

7. ದಾವಾ ಆಸ್ತಿಗೆ ಸಂಬಂಧಿಸಿದಂತೆ ಇ-ಸ್ವತ್ತಿನ ಖಾತೆ ಮಾಡಿಸುವ ಸಲುವಾಗಿ ಅಳತೆ ಮಾಡಲು ಬಂದಾಗ ನಾನು ಸಹ ಇದ್ದೆ. ಅಳತೆ ಮಾಡಲು ಬಂದಾಗ 1 ನೇ ಪ್ರತಿವಾದಿ ಮತ್ತು ಗ್ರಾಮದ ಇತರರು ಇದ್ದರು. ಅಳತೆ ಮಾಡಲು ಕಲ್ಲಾಪುರ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಮತ್ತು ಸರ್ವೇ ಅಧಿಕಾರಿಗಳು ಹಾಜರಿದ್ದರು. ದಾವಾ ಆಸ್ತಿಯು 685 ಚದುರ ಮೀಟರಗಳು ಇದ್ದು, ಅದರ ಉತ್ತರ, ದಕ್ಷಿಣ ಮತ್ತು ಪೂರ್ವ, ಪಶ್ಚಿಮ ಅಳತೆಗಳು ನನಗೆ ಗೊತ್ತಿರುವುದಿಲ್ಲ. ನಾನು ಹೇಳುವಂತೆ ದಾವಾ ಆಸ್ತಿಯು 685 ಚದುರ ಮೀಟರಗಳು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯ ಪೂರ್ವಕ್ಕೆ ಹೊಂಡ ಇದೆ ಎಂದರೆ ಸರಿ. ಸದರಿ ಹೊಂಡದ ಪೂರ್ವಕ್ಕೆ ಗುರುರಾವ್ ದೇಸಾಯಿ ರವರ ಆಸ್ತಿ ಇದೆ ಎಂದರೆ ಸರಿ. ಗುರುರಾವ್ ದೇಸಾಯಿ ರವರಿಗೆ ಸೇರಿದ ಮನೆಗೆ ಹಿತ್ತಲು ಇದೆ ಎಂದರೆ ಸರಿ. ಸದರಿ ಹಿತ್ತಲಿನಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಸಲಕರಣೆಗಳು, ಯಂತ್ರಗಳು ಮತ್ತು ಹುಲ್ಲಿನ ಬಣವೆಯನ್ನು ಗುರುರಾವ್ ದೇಸಾಯಿ ರವರ ಹೆಂಡತಿಯಾದ 1 ನೇ ಪ್ರತಿವಾದಿಯು ಇಟ್ಟುಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಯಾವ ಕಾಲದಲ್ಲಿಯೂ ಸಹ 1 ನೇ



ಪ್ರತಿವಾದಿಯು ದಾವಾ ಆಸ್ತಿಯ ಕಬ್ಜೆ ಹೊಂದಿರುವುದಿಲ್ಲ ಮತ್ತು ವಹಿವಾಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಯನ್ನು ವಾದಿಯೇ ಕಬ್ಜೆ ಹೊಂದಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯ ಸಮಿತಿಯು ಕಬ್ಜೆ ಹೊಂದಿ ವಹಿವಾಟು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. 1 ಹಾಗೂ 2 ನೇ ಪ್ರತಿವಾದಿಗಳು ಅನ್ಯೋನ್ಯವಾಗಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.**

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ